# ಗಾಂಧಿನಗರ ಪೋಸ್ಟ್

## ಚಿಟ್ಟೆಯ ರೂಪಾಂತರ

‘ಬಟರ್‌ಫ್ಲೈ’ ಎನ್ನುವ ಶೀರ್ಷಿಕೆ ಚಿತ್ರಕ್ಕಷ್ಟೇ ಅಲ್ಲ, ಚಿತ್ರದ ನಾಯಕಿ ಪರೂಲ್ ಯಾದವ್‌ರ ವೃತ್ತಿಜೀವನಕ್ಕೂ ಹೊಂದುವಂತಹದ್ದು. ಕೋಮಲ್‌ರ ’ಗೋವಿಂದಾಯ ನಮಃ’ ಚಿತ್ರದ ಮೂಲಕ ಪ್ರಸಿದ್ಧಿಗೆ ಬಂದ ಅವರು ಈವರೆಗೆ ನಟಿಸಿರುವುದೆಲ್ಲ ಗ್ಲ್ಯಾಮರ್ ಪಾತ್ರಗಳಲ್ಲೇ ಹೆಚ್ಚು. ಇದೀಗ ಮೊದಲ ಬಾರಿಗೆ, ಕಲಾವಿದೆಯಾಗಿ ಸವಾಲೆನ್ನಿಸುವಂತಹ ಪಾತ್ರದಲ್ಲಿ ನಟಿಸಿದ್ದಾರೆ.

ಬಾಲಿವುಡ್‌ನ ’ಕ್ವೀನ್’ ಕನ್ನಡದಲ್ಲಿ ’ಬಟರ್‌ಫ್ಲೈ’ ಹೆಸರಲ್ಲಿ ರೀಮೇಕ್ ಆಗಿದೆ. ’ಕ್ವೀನ್’ನಲ್ಲಿನ ಪಾತ್ರ ಪೋಷಣೆಗಾಗಿ ಕಂಗನಾ ರನೋಟ್ ರಾಷ್ಟ್ರಪ್ರಶಸ್ತಿ ಪಡೆದಿದ್ದರು. ಇಂಥ ಪಾತ್ರವನ್ನು ಮತ್ತೊಂದು ಭಾಷೆಯ ಚಿತ್ರದಲ್ಲಿ ನಟಿಸುವುದು ಯಾವ ಕಲಾವಿದೆಗಾದರೂ ಸವಾಲು. ಈ ಸವಾಲನ್ನು ಪರೂಲ್ ಖುಷಿಯಿಂದಲೇ ನಿಭಾಯಿಸಿದ್ದಾರಂತೆ. ಏರಿಳಿತಗಳನ್ನು ಒಳಗೊಂಡ ಪಾತ್ರವನ್ನು ಇಷ್ಟಪಟ್ಟೇ ಅನುಭವಿಸಿದ್ದಾರೆ.

’ಬಟರ್‌ಫ್ಲೈ’ಗೆ ಜೀವ ತುಂಬಿರುವ ನಿರ್ದೇಶಕ ರಮೇಶ್ ಅರವಿಂದ್‌ಗೆ ತಮ್ಮ ಚಿತ್ರವನ್ನು ರೀಮೇಕ್ ಎನ್ನುವುದು ಇಷ್ಟವಿಲ್ಲ. ಕಥೆಯನ್ನಷ್ಟೇ ರೀಮೇಕ್ ಮಾಡುತ್ತೇನೆ, ಸಿನಿಮಾವನ್ನಲ್ಲ ಎನ್ನುವ ಅವರು, ಕ್ವೀನ್ ಕಥೆಯನ್ನು ತಮ್ಮ ದೃಷ್ಟಿಯಲ್ಲಿ ಮರು ನಿರೂಪಿಸಿದ್ದಾರಂತೆ. ಈ ಕಥೆಗೊಂದು ಜಾಗತಿಕ ಆಯಾಮವಿದೆ ಎನ್ನುವುದು ಅವರ ನಂಬಿಕೆ. ಮೈಸೂರು ಹಾಗೂ ಪ್ಯಾರಿಸ್‌ನಲ್ಲಿ ಚಿತ್ರೀಕರಣ ನಡೆದಿರುವುದು ಕೂಡ ಹಿತ್ತಲು ಮತ್ತು ವಿಶ್ವದ ನಡುವೆ ತುಡಿಯುವ ಕಥನವನ್ನು ಹೇಳುವಂತಿದೆ.

ಸತ್ಯ ಹೆಗಡೆ ಛಾಯಾಗ್ರಹಣ ಮತ್ತು ಅಮಿತ್ ತ್ರಿವೇದಿ ಸಂಗೀತ ಸಂಯೋಜನೆ ಚಿತ್ರಕ್ಕಿದೆ. ಈ ಸಿನಿಮಾವನ್ನು ತಮಿಳು, ತೆಲುಗಿನಲ್ಲೂ ರಮೇಶ್ ರೂಪಿಸಿದ್ದಾರೆ. ತಮಿಳು ಆವೃತ್ತಿಯಲ್ಲಿ ಕಾಜಲ್ ಅಗರವಾಲ್ ನಾಯಕಿಯಾದರೆ, ತೆಲುಗಿನಲ್ಲಿ ತಮನ್ನಾ ನಟಿಸಿದ್ದಾರೆ. ಮುಂಗಾರಿಗೆ ಮುನ್ನವೇ, ಮೇ ತಿಂಗಳಲ್ಲಿ ಚಿತ್ರವನ್ನು ತೆರೆಕಾಣಿಸುವ ತವಕ ಅವರದು.





## ಮತ್ತೊಮ್ಮೆ ಎಡಕಲ್ಲು!

’ಎಡಕಲ್ಲು ಗುಡ್ಡದ ಮೇಲೆ’ ಪುಟ್ಟಣ್ಣ ಕಣಗಾಲರ ಜನಪ್ರಿಯ ಚಿತ್ರಗಳಲ್ಲೊಂದು. ಇದೇ ಶೀರ್ಷಿಕೆಯನ್ನು ಇಟ್ಟುಕೊಂಡು ತಮ್ಮದೇ ಕಥೆಯೊಂದನ್ನು ಹೇಳಲು ಹೊರಟಿದ್ದಾರೆ ನಿರ್ದೇಶಕ ವಿವಿನ್ ಸೂರ್ಯ.

ಪುಟ್ಟಣ್ಣರ ಎಡಕಲ್ಲಿಗೂ ವಿವಿನ್‌ರ ಚಿತ್ರಕಥೆಗೂ ಸಾಕಷ್ಟು ವ್ಯತ್ಯಾಸವಿದೆಯಂತೆ. ಆದರೆ, ತಮ್ಮ ಕಥೆಗೆ ಇದೇ ಶೀರ್ಷಿಕೆ ಹೊಂದುತ್ತದೆ ಎಂದು ಬಲವಾಗಿ ಅನ್ನಿಸಿದ್ದರಿಂದ ಅವರು ಗುಡ್ಡಕ್ಕೆ ಜೋತುಬಿದ್ದಿದ್ದಾರೆ. ಮಕ್ಕಳಿಗೆ ಸಮಯ ಕೊಡಲು ಸಾಧ್ಯವಾಗದಿರುವ ಹೊಸ ಕಾಲದ ಪಾಲಕರ ಹಿನ್ನೆಲೆಯಲ್ಲಿ, ಸಂಬಂಧಗಳನ್ನು ವಿಶ್ಲೇಷಿಸುವ ಕಥೆ ಚಿತ್ರದಲ್ಲಿದೆಯಂತೆ. ಹತ್ತು ವರ್ಷದ ಬಾಲಕಿಯೊಬ್ಬಳ ಬದುಕಿನ ಕಥನದ ಸಿನಿಮಾವನ್ನು ’ಮಹಿಳಾಪ್ರಧಾನ ಚಿತ್ರ’ ಎಂದೂ ಕರೆಯಬಹುದು.

ವಿವಿನ್ ತಮ್ಮ ಚಿತ್ರಕ್ಕೆ ಕಲೆಹಾಕಿರುವ ತಾರಾಗಣ ಆಕರ್ಷಕವಾಗಿದೆ. ಕಿರುತೆರೆಯ ಪ್ರಸಿದ್ಧ ತಾರೆಯರಾದ ಜ್ಯೋತಿ ಮತ್ತು ಸ್ವಾತಿ ಚಿತ್ರದಲ್ಲಿದ್ದಾರೆ. ಇವರ ಜೊತೆಗೆ ಭಾರತಿ ವಿಷ್ಣುವರ್ಧನ್, ದತ್ತಣ್ಣ, ಶ್ರೀಧರ್, ಸಿಹಿಕಹಿ ಚಂದ್ರು, ಸುಮಿತ್ರಾ ಅವರನ್ನೊಳಗೊಂಡ ಹಿರಿಯ ನಟರ ದಂಡೇ ಚಿತ್ರದಲ್ಲಿದೆ.

ಪುಟ್ಟಣ್ಣನವರ ’ಎಡಕಲ್ಲು ಗುಡ್ಡದ ಮೇಲೆ’ ಚಿತ್ರದ ಚಂದ್ರಶೇಖರ್ ಅವರು ಕೂಡ ತಾರಾಗಣದಲ್ಲಿರುವುದು ಚಿತ್ರದ ಮತ್ತೊಂದು ವಿಶೇಷ. ಈಗ ಚಂದ್ರಶೇಖರ್ ಅವರ ಕಣ್ಮರೆಯ ಹಿನ್ನೆಲೆಯಲ್ಲಿ ತೆರೆ ಕಾಣಲು ಸಿದ್ಧತೆ ನಡೆಸುತ್ತಿರುವ ಸಿನಿಮಾ, ಒಂದರ್ಥದಲ್ಲಿ ಅಗಲಿದ ನಟನಿಗೆ ಸಲ್ಲುತ್ತಿರುವ ಶ್ರದ್ಧಾಂಜಲಿಯೂ ಹೌದು.